# ಪುಸ್ತಕಾವತಾರ

ಮನುಷ್ಯನ ಬೌದ್ಧಿಕ ಹಾಗೂ ಭಾವನಾತ್ಮಕ ವಿಕಾಸ ಪ್ರಕ್ರಿಯೆಯಲ್ಲಿ ವೇಗವರ್ಧಕದಂತೆ ಕಾರ್ಯ ನಿರ್ವಹಿಸುವ ಪ್ರಮುಖ ಸಾಧನಗಳಲ್ಲಿ ಪುಸ್ತಕವೂ ಒಂದು. ಮನುಷ್ಯನ ಅನುಭವ, ಅನಿಸಿಕೆ, ಆಲೋಚನೆಗಳು ಮಾತಿನ ರೂಪದಲ್ಲಷ್ಟೇ ಉಳಿದುಕೊಳ್ಳುವಂತಾಗಿದ್ದರೆ, ಮನುಷ್ಯ ಸಂತತಿಯ ಬೆಳವಣಿಗೆ ಕುಂಠಿತಗೊಳ್ಳುತ್ತಿತ್ತು. ಏಕೆಂದರೆ ಗಾಳಿಯಲ್ಲಿ ಹುಟ್ಟಿ, ಗಾಳಿಯಲ್ಲೇ ಮರೆಯಾಗುವ ಮಾತುಗಳ ಪ್ರಸರಣ ಸೀಮಿತವಾದುದು; ಮಾತ್ರವಲ್ಲ; ಅವು ಕೇಳುಗನ ಆಸಕ್ತಿ, ಏಕಾಗ್ರತೆ ಹಾಗೂ ಸ್ಮರಣ ಶಕ್ತಿಗಳನ್ನು ಅವಲಂಬಿಸಿರುವಂಥದು. ಎಷ್ಟೋ ಬಾರಿ ಒಬ್ಬನ ಬಾಯಿಂದ ಹೊರಟ ಮಾತು ನಾಲ್ಕಾರು ಕಿವಿ ಬಾಯಿಗಳನ್ನು ದಾಟಿ ಹೋಗುವಾಗ ತನ್ನ ಮೂಲರೂಪವನ್ನೇ ಕಳೆದುಕೊಳ್ಳುವ ಸಂಭವವೂ ಇರುತ್ತದೆ. ಕೇವಲ ಶಾಬ್ದಿಕ ರೂಪದಲ್ಲಿರುವ ಆಲೋಚನೆ ಚಿಂತನೆಗಳು ಕಾಲದಿಂದ ಕಾಲಕ್ಕೆ, ಪೀಳಿಗೆಯಿಂದ ಪೀಳಿಗೆಗೆ ಮೂಲ ರೂಪದಲ್ಲಿ ಲಭ್ಯವಾಗುವುದೂ ಕಷ್ಟ. ಆದ್ದರಿಂದಲೇ ಮಾತುಗಳಿಗೆ ಖಚಿತ ಆಕೃತಿಕೊಟ್ಟು ತನ್ನ ಅನುಭವ, ಆಲೋಚನೆಗಳನ್ನು ಹಿಡಿದಿಟ್ಟುಕೊಳ್ಳಬೇಕೆಂಬ ಹಂಬಲ ಮನುಷ್ಯನಲ್ಲಿ ಹುಟ್ಟಿಕೊಂಡು ಲಿಪಿ ಅಥವಾ ಅಕ್ಷರದ ಉಗಮಕ್ಕೆ ಕಾರಣವಾಯಿತು. ಲಿಪಿಯ ಸಾಹಚರ್ಯದಿಂದಾಗಿ ಮನುಷ್ಯನ ಅನುಭವ, ಚಿಂತನೆಗಳು ಪೀಳಿಗೆಯಿಂದ ಪೀಳಿಗೆಗೆ ಅನುಸ್ಯೂತವಾಗಿ ಪ್ರವಹಿಸಲು ಸಾಧ್ಯವಾಯಿತು. ಮೊದ ಮೊದಲು ಮಣ್ಣಿನ ಮೇಲೋ, ಕಲ್ಲಿನ ಮೇಲೋ, ಮರದ ತೊಗಟೆಯ ಮೇಲೋ ತನ್ನ ವಿಚಾರಗಳನ್ನು ಅಕ್ಷರಗಳಲ್ಲಿ ಸ್ಥಿರಗೊಳಿಸಲು ಮನುಷ್ಯ ಪ್ರಯತ್ನಿಸುತ್ತಿದ್ದ. ಇಂಥ ಪ್ರಯತ್ನಕ್ಕೆ 'ಪುಸ್ತಕ'ವೆಂಬ ಖಚಿತ ರೂಪ ಪ್ರಾಪ್ತವಾಗಲು ಅದೆಷ್ಟೋ ಶತಮಾನಗಳು ಬೇಕಾದವು.

ಈಗ ನಮಗೆ ಅತ್ಯಂತ ಪರಿಚಿತವಾಗಿರುವ ಪುಸ್ತಕ ಎಷ್ಟೆಷ್ಟೋ ಅವತಾರಗಳನ್ನು ಪೂರೈಸಿ ಬಂದಿರುವಂಥದು. ಮೆಸಪೊಟೇಮಿಯ, ಸುಮೇರಿಯ, ಬ್ಯಾಬಿಲೋನಿಯ– ಇತ್ಯಾದಿ ಪ್ರಾಚೀನ ನಾಗರಿಕತೆಗಳ ಕಾಲ ಘಟ್ಟದಲ್ಲಿ ಅಕ್ಷರಗಳನ್ನು ಪುಸ್ತಕವಾಗಿಸಿ, ರಕ್ಷಿಸಿಡುವ ಪ್ರಕ್ರಿಯೆ ಪ್ರಾರಂಭವಾಯಿತೆನ್ನಬಹುದು. ಸುಮಾರು ಕ್ರಿ.ಪೂ. 400 ರಲ್ಲಿಯೇ ಸುಮೇರಿಯನ್ನರು ಹಸಿಯ ಮಣ್ಣಿನ ಹಲಗೆಗಳನ್ನು ತಮ್ಮ ಬರೆವಣಿಗೆಗೆ ಉಪಯೋಗಿಸುತ್ತಿದ್ದರಂತೆ. ಇಂಥ 'ಫಲಕ ಪುಸ್ತಕ'ಗಳ ಮೇಲೆ ಸುಮೇರಿಯನ್ನರು ಚಾರಿತ್ರಿಕ ಹಾಗೂ ಪೌರಾಣಿಕ ಕಾವ್ಯಗಳನ್ನೂ ಸೃಷ್ಟಿಸಿದ್ದರು. ಕ್ರಮೇಣ ಇಂಥ ಫಲಕ ಪುಸ್ತಕಗಳ ಬದಲಾಗಿ ಪ್ಯಾಪಿರಸ್ ಸುರುಳಿ ಪುಸ್ತಕಗಳ ಬಳಕೆ ಪ್ರಾರಂಭವಾಯಿತು. ಪ್ಯಾಪಿರಸ್ ಎಂಬುದು ಈಜಿಪ್ಟ್‌ನ ನೈಲ್ ನದಿ ತೀರದಲ್ಲಿ ಬೆಳೆಯುವ ಒಂದು ಬಗೆಯ ಜೊಂಡು ಹುಲ್ಲು. ಈಜಿಪ್ಷಿಯನ್ನರು ಐದಾರು ಅಂಗುಲ ಉದ್ದವಿರುವ ಪ್ಯಾಪಿರಸ್ ಎಲೆಗಳ ಒಂದು ಮಗ್ಗುಲಲ್ಲಿ ಚೂಪಾದ ಲೋಹದ ಕಡ್ಡಿಯಿಂದ ಅಕ್ಷರಗಳನ್ನು ಬರೆಯುತ್ತಿದ್ದರು. ಅಂಥ ಎಲೆಗಳನ್ನು ಸುರುಳಿಯಾಗಿ ಸುತ್ತಿ ಮಣ್ಣಿನ ಮಡಕೆಗಳಲ್ಲಿ ಜೋಡಿಸಿ ಇಡಲಾಗುತ್ತಿತ್ತು (ಈ ಪ್ಯಾಪಿರಸ್ ಪದವೇ 'ಪೇಪರ್' ಎಂಬ ಪದದ ತಾಯಿ.) ಇದೇ ತಂತ್ರವನ್ನು ಮುಂದುವರಿಸಿದ ಚೀನೀಯರು ಬರೆವಣಿಗೆಗೆ ತಾಳೆಗರಿಗಳನ್ನು ಬಳಸತೊಡಗಿದರು. ಭಾರತೀಯರೂ ಭೂರ್ಜ್ವ ಪತ್ರಗಳ ಮೇಲೆ ಹಾಗೂ ತಾಳೆಗರಿಗಳ ಮೇಲೆ ಬರೆಯುತ್ತಿದ್ದರು. ಇಂಥ ತಾಳೆಗರಿಗಳ ಪುಸ್ತಕಗಳನ್ನು ನಮ್ಮ ಪ್ರಾಚೀನ ಗ್ರಂಥ ಭಂಡಾರಗಳಲ್ಲಿ ಈಗಲೂ ನೋಡಬಹುದು.

ಮೊಟ್ಟ ಮೊದಲು ಕಾಗದ ತಯಾರಾದುದು ಚೀನಾ ದೇಶದಲ್ಲಿ. ಚೀನಾದ ಖೋಜಾಟ್ಸಾಯ್ ಎಂಬಾತ ಮರದ ತೊಗಟೆ, ಚಿಂದಿ ಬಟ್ಟೆ, ಮೀನು ಬಲೆ ಮುಂತಾದವುಗಳನ್ನು ಬಳಸಿಕೊಂಡು ಬಳಸಿಕೊಂಡು ಕಾಗದ ತಯಾರಿಸಿದನಂತೆ. ಕಾಗದದ ಅನ್ವೇಷಣೆಗೆ ಸ್ವಲ್ಪ ಮೊದಲು ಪ್ರಾಣಿಗಳ ಚರ್ಮದ ಮೇಲೂ ಬರೆವಣಿಗೆಯ ಪ್ರಯೋಗ ನಡೆದಿತ್ತು ಎನ್ನುತ್ತಾರೆ ಇತಿಹಾಸಕಾರರು. ಬ್ರಿಟಿಷರು ಬೀಚ್ ಮರದಿಂದ ಮಾಡಿದ ಹಲಗೆಗಳನ್ನು ಬಳಸಿ ಬರೆವಣಿಗೆಯನ್ನು ಮುಂದುವರೆಸಿದರು. ಆ್ಯಗ್ಲೋ–ಸಾಕ್ಸನ್ ಭಾಷೆಯಲ್ಲಿ ಬೀಚ್ ಮರಕ್ಕೆ 'ಬಾಕ್' ಎನ್ನುತ್ತಿದ್ದರು. 'ಬಾಕ್' ಎನ್ನುವ ಪದವೇ ಇಂಗ್ಲಿಷಿನ 'ಬುಕ್' ಎನ್ನುವುದರ ಬೇರು. ಹದಿನೈದನೆಯ ಶತಮಾನದ ಪೂರ್ವಾರ್ಧದಲ್ಲಿ ಜರ್ಮನಿಯ ಜಾನ್ ಗುಟನ್ ಬರ್ಗ್ ಮುದ್ರಣ ಯಂತ್ರವನ್ನು ಕಂಡುಹಿಡಿದು, ಪುಸ್ತಕದ ಇತಿಹಾಸದಲ್ಲಿ ಒಂದು ರೋಮಾಂಚಕ ತಿರುವನ್ನು ಉಂಟುಮಾಡಿದ. ಪುಸ್ತಕ ಮುದ್ರಣ ಒಂದು ಉದ್ಯಮವಾಯಿತು. ಪುಸ್ತಕಗಳ ಪ್ರಸರಣದಿಂದ ಇಡೀ ಜಗತ್ತಿನಲ್ಲಿ ಸಾಂಸ್ಕೃತಿಕ ಬದಲಾವಣೆ ಕಾಣಿಸಿಕೊಳ್ಳುವಂತಾದುದಲ್ಲದೆ ಜ್ಞಾನ ಸಂವಹನಕ್ಕೆ ಇದ್ದ ಕಾಲ ದೇಶಗಳ ಅಡಚಣೆ ಮಾಯವಾಯಿತು. ಪ್ರಸ್ತುತ ಕಾಲ ಘಟ್ಟದಲ್ಲಿ ಕಾಗದದ ಹಂಗೇ ಇಲ್ಲದ, ಮುದ್ರಣ ಯಂತ್ರಗಳನ್ನು ಅವಲಂಬಿಸದ 'ಇ–ಪುಸ್ತಕ'ಗಳು ಹುಟ್ಟಿವೆ. ಒಟ್ಟಿನಲ್ಲಿ ಅನೇಕ ಅವತಾರಗಳನ್ನು ಹಾದು ಬಂದಿರುವ ಪುಸ್ತಕ ಜ್ಞಾನ ಪ್ರಸಾರದ ಸಮರ್ಥ ಮಾಧ್ಯಮವಾಗಿ, ಮನುಷ್ಯ ಲೋಕದ ಅಭಿವ್ಯಕ್ತಿಯ ಆಕರವಾಗಿ, ಗತ ಆಗತಗಳ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತಿದೆ!

■ **ವೈನತೇಯ**

## ಮಾತೇ ಮುತ್ತು

★ ಜನರಿಗೆ ಶಿಕ್ಷಣ ಕೊಡಿ– ಹಣವನ್ನಲ್ಲ.

–ಮಹಾತ್ಮಾ ಗಾಂಧೀಜಿ

★ ಶಿಕ್ಷಣಕ್ಕೆ ಕೊನೆಯಿಲ್ಲ. ಒಂದು ಪುಸ್ತಕ ಓದಿದಾಕ್ಷಣ, ಪರೀಕ್ಷೆ ತೇರ್ಗಡೆಯಾದಾಕ್ಷಣ ಅದು ಮುಗಿಯುವುದಿಲ್ಲ. ತೊಟ್ಟಿಲಿನಿಂದ ಹಿಡಿದು ಸಾವಿನವರೆಗೂ ಶಿಕ್ಷಣ ನಡೆದೇ ಇರುತ್ತದೆ.

–ಜಿಡ್ಡು ಕೃಷ್ಣಮೂರ್ತಿ

★ ದೀರ್ಘಕಾಲ ಬದುಕಿದರೆ ನೀವು ಹೆಚ್ಚು ತಪ್ಪುಗಳನ್ನು ಮಾಡುತ್ತೀರಿ. ಆದರೆ ಆ ತಪ್ಪುಗಳಿಂದ ಪಾಠ ಕಲಿತರೆ ನೀವು ಉತ್ತಮ ಮನುಷ್ಯರಾಗುತ್ತೀರಿ.

–ವಿಲಿಯಂ ಕ್ಲಿಂಟನ್

★ ತುಂಬ ಸಂತೋಷ ಹೊಂದಿದಾಗ ನಿಮ್ಮ ಹೃದಯದೊಳಕ್ಕೆ ಇಣುಕಿ ನೋಡಿ– ಇವತ್ತು ನಿಮಗೆ ಸಂತೋಷ ಕೊಟ್ಟದ್ದೇ ಹಿಂದೆ ದುಃಖವನ್ನು ಕೊಟ್ಟಿತ್ತು ಎಂಬುದು ಅರಿವಾಗುತ್ತದೆ.

–ಖಲೀಲ್ ಗಿಬ್ರಾನ್

★ ಬದುಕು ಎನ್ನುವುದು ನೈಸರ್ಗಿಕ ಮತ್ತು ಅದರಷ್ಟಕ್ಕೆ ಘಟಿಸುವ ಬದಲಾವಣೆಗಳ ಸರಣಿ. ಅದನ್ನು ಪ್ರತಿರೋಧಿಸಬೇಡಿ, ಅದರಿಂದ ದುಃಖವಷ್ಟೇ ಹೆಚ್ಚುತ್ತದೆ.

–ಲಾವೊ ತ್ಸು

★ ಎಲ್ಲವನ್ನು ಕೊಟ್ಟಿರುವೆ ಏನ ಬೇಡಲಿ ಜಗವನೆನಗೆ ಬಿಟ್ಟಿರುವೆ ಏಕೆ ಕಾಡಲಿ?

–ಕೆ.ಎಸ್.ನರಸಿಂಹಸ್ವಾಮಿ

★ ನಿಮ್ಮ ಸಹಿ ಆಟೊಗ್ರಾಫ್ ಆಗಿ ಬದಲಾದರೆ ಅದೇ ಯಶಸ್ಸು.

–ಎ.ಪಿ.ಜೆ. ಅಬ್ದುಲ್ ಕಲಾಮ್

★ ನನ್ನ ತತ್ವಜ್ಞಾನ ತುಂಬ ಸರಳ. ಖಾಲಿ ಇರುವುದನ್ನು ತುಂಬಿಸಿ; ತುಂಬಿರುವುದನ್ನು ಖಾಲಿ ಮಾಡಿ. ಎಲ್ಲಿ ತುರಿಕೆಯಾಗುತ್ತದೋ ಅಲ್ಲಿ ಮಾತ್ರ ತುರಿಸಿ.

–ಅಲೈಸ್ ಲಾಂಗ್‌ವರ್ತ್

★ ಕಳೆದುಹೋದ ನಿನ್ನೆ ನಮ್ಮದಲ್ಲ. ಆದರೆ ನಾಳೆ ಎನ್ನುವುದು ಗೆಲ್ಲಲು ಅಥವಾ ಸೋಲಲು ನಮ್ಮದೇ.

–ಲಿಂಡನ್ ಜಾನ್ಸನ್

★ ನೀತಿಗೆಟ್ಟವನಿಗೆ ನಿಯತ್ತಿನ ಅರ್ಥ ಗೊತ್ತಿರುವುದಿಲ್ಲ. ಗೊತ್ತಿದ್ದರೂ ಅದು ಅವನಿಗೆ ಅರ್ಥವಾಗುವುದಿಲ್ಲ. ಅರ್ಥವಾದರೂ ಅವನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಳವಡಿಸಿಕೊಂಡರೂ ಜನ ಅವನನ್ನು ನಂಬುವುದಿಲ್ಲ.

–ಸುಭಾಷಿತ

★ ನಾನು ಯಾವತ್ತೂ ಬದುಕಿನ ಆಶಾವಾದದ ಬಗ್ಗೆ ಯೋಚಿಸ ಬಯಸುತ್ತೇನೆ. ಆದರೆ ಜೀವನ ಎನ್ನುವುದು ಸಂಕೀರ್ಣವೆಂದು ತಿಳಿದುಕೊಳ್ಳುವಷ್ಟು ವಾಸ್ತವವಾದಿಯೂ ಹೌದು.

–ವಾಲ್ಟ್ ಡಿಸ್ನಿ